



# ಚಿಕನ್ ವಯರ್ ಕಲಾಕೃತಿ

**ಕ**ಲೆಯನ್ನು ಬಿಂಬಿಸುವ ನೂತನ ಮಾಧ್ಯಮಕ್ಕಾಗಿ, ನೂತನ ಪ್ರಕಾರಕ್ಕಾಗಿ ಕಲಾವಿದರೆಲ್ಲರೂ ಸತತ ಹುಡುಕಾಟ ನಡೆಸುತ್ತಿರುತ್ತಾರೆ, ಪ್ರಯೋಗಶೀಲರಾಗಿರುತ್ತಾರೆ. ಖ್ಯಾತ ಮೆಷ್ ವಯರ್ ಕಲಾವಿದ ಇವಾನ್ ಲೊವಾಟ್ ಕೂಡಾ ಇಂತಹ ಹುಡುಕಾಟದಲ್ಲಿ ತೊಡಗಿದಾತನೇ.

ಇದೋ ಇಲ್ಲಿವೆ ನೋಡಿ ಈತ ರಚಿಸಿದ ಮೆಷ್ ವಯರ್ ಕಲಾಕೃತಿಗಳು. 'ಕಟ್ಟಡ ಕಟ್ಟುವಾಗ, ಬೃಹತ್ ಪ್ರಮಾಣದ ಪ್ಲಾಸ್ಟರ್ ಶಿಲ್ಪಗಳನ್ನು ತಯಾರಿಸುವಾಗ ಟೊಳ್ಳು ಮಾದರಿ ರಚಿಸಿಕೊಳ್ಳಲು ಬಳಸಲಾಗುತ್ತಿದ್ದ ಚಿಕನ್ ಮೆಷ್ ಅಥವಾ ಚಿಕನ್ ವಯರ್ ನನ್ನ ಆಸಕ್ತಿ ಕೆರಳಿಸಿತು. ಅದನ್ನೇ ಬಳಸಿ ಪ್ರಾಣಿ, ಪಕ್ಷಿ, ವನ್ಯಜೀವಿಗಳನ್ನು ರಚಿಸಿದೆ. ವಿಶ್ವವಿಖ್ಯಾತ ಕಲಾವಿದರು, ಸಾಹಸಿಗಳು ಹಾಗೂ ಜಗತ್ಪ್ರಸಿದ್ಧ ವ್ಯಕ್ತಿಗಳ ವಯರ್ ಕಲಾಕೃತಿಗಳನ್ನು ನಿರ್ಮಿಸಿದೆ. ಇದು ಹೆಚ್ಚು ಸಮಯವನ್ನು ತೆಗೆದುಕೊಳ್ಳುವ ಕೆಲಸವಾದರೂ ನನ್ನ ಮನಸ್ಸಿಗೆ ಅತೀವ ತೃಪ್ತಿ ತರುವ ಕೆಲಸವಾಗಿದೆ' ಎನ್ನುತ್ತಾನೆ ಕಲಾವಿದ ಇವಾನ್ ಲೊವಾಟ್.

ಕೀನ್ಯಾದ ನೈರೋಬಿಯಲ್ಲಿ ಜನಿಸಿದ ಇವಾನ್ ಲೊವಾಟ್ ಆಫ್ರಿಕಾ, ಜರ್ಮನಿ, ವೇಲ್ಸ್ ಮತ್ತು ಇಂಗ್ಲೆಂಡ್‌ಗಳಲ್ಲಿ ಕೆಲಸ ಮಾಡಿ 1994ರಿಂದ ಆಸ್ಟ್ರೇಲಿಯಾದ ಗೋಲ್ಡ್ ಕೋಸ್ಟ್ ವಿಂಟರ್‌ಲೆಂಡ್‌ನಲ್ಲಿ ಪತ್ನಿ ಏಪ್ರಿಲ್ ಮತ್ತು ಪುತ್ರ ಜೇಮ್ಸ್ ಜೊತೆ ವಾಸಿಸುತ್ತಿದ್ದಾರೆ. 1994ರಲ್ಲಿ ಮೊದಲ ಬಾರಿಗೆ ಗ್ರಂಥಮ್ ಗಿಲ್ಡ್ ಹಾಲ್‌ನಲ್ಲಿ ತನ್ನ ಚಿತ್ರಗಳ ಹಾಗೂ ಮೆಷ್ ಕಲಾಕೃತಿಗಳ ಪ್ರದರ್ಶನ ಏರ್ಪಡಿಸಿದ ಲೊವಾಟ್ ಪ್ರಪಂಚದ ಹಲವು ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಗಿಟ್ಟಿಸಿದ್ದಾರೆ.

2004ರಿಂದೀಚೆಗೆ ಭಾಗವಹಿಸಿರುವ ಬಹುತೇಕ ಎಲ್ಲ ಅಂತರರಾಷ್ಟ್ರೀಯ ಕಲಾಕೃತಿಗಳ ಪ್ರದರ್ಶನಗಳಲ್ಲಿ ಪ್ರಥಮ ಬಹುಮಾನ ಗಳಿಸಿರುವ ಲೊವಾಟ್‌ಗೆ ವನ್ಯಜೀವಿಗಳ ಮೆಷ್ ಶಿಲ್ಪಗಳನ್ನು ರಚಿಸುವುದೆಂದರೆ ತುಂಬಾ ಇಷ್ಟ. ಸರ್ ಎಡ್ಮಂಡ್ ಹಿಲರಿ, ಮೈಕೆಲ್ ಜಾಕ್ಸನ್, ಬೀಟ್ಲ್ ಹಾಡುಗಾರರು, ಸಾಲ್ವಡಾರ್ ಡಾಲಿ ಮೊದಲಾದ ಮಹಾನ್ ವ್ಯಕ್ತಿಗಳ ಮೆಷ್ ಶಿಲ್ಪಗಳು ಜನಪ್ರಿಯವಾಗಿವೆ. ಇವರ ಹಲವಾರು ಕಲಾಕೃತಿಗಳು ವಿಶ್ವದಾದ್ಯಂತ ಖಾಸಗಿ ಸಂಗ್ರಹಾಲಯಗಳಲ್ಲಿ ಸೇರ್ಪಡೆಗೊಂಡಿವೆ.

■ ಬೇದ್ರೆ ಮಂಜುನಾಥ




ಸರ್ ಎಡ್ಮಂಡ್ ಹಿಲರಿ

ಐವಾನ್ ಲೊವಾಟ್ ದಿ ಬೀಟಲ್ಸ್

